**<u>ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ ದಂ.ರವರ ನ್ಯಾಯಾಲಯ ತಿಪಟೂರು</u>**

**ಸಿ.ಸಿ.ನಂ. 2187/2014**

**ಪಿರ್ಯಾದಿಃ** ನೊಣವಿನಕೆರೆ ಪೋಲಿಸ್ ಠಾಣೆ

ವಿರುದ್ಧ

**ಆರೋಪಿತರು** ವೇದಾನಂದ ಮತ್ತು ಇತರರು

**<u>ದಂಡ ಪ್ರಕ್ರಿಯಾ ಸಂಹಿತೆ 1973 ಕಲಂ 313 ರ ಕೆಳಗೆ ಆರೋಪಿತರ ಹೇಳಿಕೆ</u>**

ಪ್ರಶ್ನೆಃ **1-** ಈ ಪ್ರಕರಣದಲ್ಲಿ ಅಭಿಯೋಜನೆಯ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿರುವಿರಾ**?**

**ಉತ್ತರಃ- ಆರೋಪಿ ನಂ.1 ಹೌದು**
**ಆರೋಪಿ ನಂ.2 ಹೌದು**
**ಆರೋಪಿ ನಂ.3 ಹೌದು**

ಪ್ರಶ್ನೆಃ **2-** ಪ್ರಾಸಾ**-1** ಪವಿತ್ರ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿತರು ತಮಗೆ ಗೊತ್ತು**, 1**ನೇ ಆರೋಪಿ ತಮ್ಮ ಗಂಡ**, 2**ನೇ ಮತ್ತು **3**ನೇ ಆರೋಪಿತರು ತಮ್ಮ ಅತ್ತೆ ಮತ್ತು ಮಾವ**.** ತಮ್ಮ ಮದುವೆ ನೊಣವಿನಕೆರೆಯ ಮಠದಪಾಳ್ಯ ಗ್ರಾಮದ **1**ನೇ ಆರೋಪಿಯೊಂದಿಗೆ ದಿ ಃ **25.07.2012** ರಂದು ತಿಪಟೂರಿನ ಗುರುಕುಲ ಕಲ್ಯಾಣ ಮಂಟಪದಲ್ಲಿ ಹಿಂದೂ ಸಂಪ್ರದಾಯದಂತೇ ಶಾಸ್ತ್ರೋಕ್ತವಾಗಿ ನಡೆದ್ದಾಗಿ**,** ಮದುವೆಗೆ ಮುಂಚೆ ಮಾತುಕತೆಯಲ್ಲಿ ವರನಿಗೆ **54** ಗ್ರಾಂ ಚಿನ್ನ**,** ತಮಗೆ **150** ಗ್ರಾಂ ಚಿನ್ನ ವರೋಪಚಾರಕ್ಕೆ **1** ಕೆ**.** ಜಿ ಬೆಳ್ಳಿ ಸಾಮಾನು**,** ಒಂದೂವರೆ ಲಕ್ಷ ನಗದು ಹಣವನ್ನು ಕೇಳಿದ್ದು**,** ತಮ್ಮ ತಂದೆ ವರದಕ್ಷಿಣೆಯಾಗಿ ರೂ**.1,50,000-00** ಕೊಟ್ಟು ಮದುವೆ ಮಾಡಿದ್ದಾಗಿ**,** ಮದುವೆಯಾದ ನಂತರ ತಮ್ಮ ಗಂಡನ ಮನೆಯಲ್ಲಿ **2** ಮತ್ತು **3**ನೇ ಆರೋಪಿತರ ಜೊತೆ **10** ತಿಂಗಳು ವಾಸವಿದ್ದಾಗಿ**,** ಅಲ್ಲಿಯವರೆಗೆ ತಮ್ಮ ಗಂಡ ತಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಿದ್ದಾಗಿ**,** ನಂತರದಲ್ಲಿ **2** ಮತ್ತು **3**ನೇ ಆರೋಪಿತರು ತಮ್ಮನ್ನು ಅವಾಚ್ಯ ಶಬ್ದಗಳಿಂದ ಬೈಯ್ಯುವುದು ಮತ್ತು ಹೊಡೆಯುವುದು

ಮಾಡುತ್ತಿದ್ದಿದ್ದಾಗಿ ಹಾಗೂ 2ನೇ ಆರೋಪಿ ತಮ್ಮನ್ನು ಅಡುಗೆ ಮನೆಗೆ ಬಿಡುತ್ತಿರುವುದಿಲ್ಲವಾಗಿ, ಆರೋಪಿತರೆಲ್ಲರೂ ತಾವು ಅಡುಗೆ ಮನೆಗೆ ಹೋಗುವುದು ಬೇಡ, ತಾವು ನಾವು ಹಾಕಿದ್ದನ್ನು ತಿಂದುಕೊಂಡು ನಾಯಿಯ ರೀತಿ ಬಿದ್ದಿರಬೇಕೆಂದು ಬೈಯುವುಂಾಗಿ, ತಾವು ಯಾಕೆ ಈ ರೀತಿ ಹಿಂಸೆ ಕೊಡುತ್ತಿದ್ದಿರೆಂದು ಕೇಳಿದಾಗಿ ಆರೋಪಿತರು ತಮಗೆ ತಾವು ಕೊಟ್ಟಿರುವ ವರದಕ್ಷಿಣೆ ಸಾಕಾಗುವುದಿಲ್ಲ, ಇನ್ನೂ 5 ಲಕ್ಷ ರೂ ಹಣ ತರುವಂತೆ ಕೇಳುತ್ತಿದ್ದಾಗಿ, ಈ ಸಮಯದಲ್ಲಿ ತಾವು ಗರ್ಭಿಣಿಯಾಗಿದ್ದಾಗಿ, ಈ ವಿಚಾರವನ್ನು ತಾವು ತಮ್ಮ ತಂದೆ ತಾಯಿಗೆ ಫೋನಿನಲ್ಲಿ ತಿಳಿಸಿದ್ದಾಗಿ, ದಿ ಃ 02.05.2013 ರಂದು ಬೆಳಗ್ಗೆ 10.00 ಗಂಟೆ ಸಮಯದಲ್ಲಿ ಆರೋಪಿತರು ಮನಗೆ ತಮ್ಮ ತಂದೆ, ತಾಯಿ, ಸೋದರಮಾವ, ಚಿಕ್ಕಮ್ಮ ಬಂದಿದ್ದಾಗಿ, ಆಗ ತಮ್ಮ ಮೈ ಮೇಲಿನ ಗಾಯದ ಗುರುತುಗಳನ್ನು ನೋಡಿ ತಮ್ಮ ತಂದೆ ತಾಯಿ ಕೇಳಿದಾಗ ತಾವು ನಡೆದ ಎಲ್ಲಾ ವಿಚಾರ ತಿಳಿಸಿದ್ದಾಗಿ, ಆ ಬಗ್ಗೆ ತಮ್ಮ ತಂದೆ ತಾಯಿ ಆರೋಪಿತರನ್ನು ಕೇಳಿದಾಗ ಆರೋಪಿತರು ಅದು ತಮ್ಮ ಇಷ್ಟ. ತಾವು 5 ಲಕ್ಷ ರೂ ಕೊಟ್ಟರೆ ತಮ್ಮ ಮಗಳನ್ನು ಬಾಳಿಸುತ್ತೇವೆಂದು ಹೇಳಿದ್ದಾಗಿ, ನಂತರ ತಮ್ಮ ತಂದೆ ತಾಯಿ ತಾವು ಈಗಾಗಲೇ ಸಾಲ ಮಾಡಿ ವರದಕ್ಷಿಣೆ ಕೊಟ್ಟು ಮದುವೆ ಮಾಡಿರುವುದರಿಂದ ಇನ್ನೂ ಹೆಚ್ಚು ವರದಕ್ಷಿಣೆ ಹಣ ಕೊಡಲು ತಮ್ಮಿಂದ ಸಾಧ್ಯವಿಲ್ಲವೆಂದಾಗಿ ತಿಳಿಸಿ, ತಮ್ಮ ಮಗಳನ್ನು ಚೆನ್ನಾಗಿ ನೋಡಿಕೊಳ್ಳಿ ಎಂದು ಹೇಳಿದರೂ ಸಹ ಆರೋಪಿತರೆಲ್ಲರೂ ತಮಗೆ 5 ಲಕ್ಷ ಹಣ ಬೇಕೆ ಬೇಕೆಂದು ಜೋರಾಗಿಯೇ ಗಲಾಟೆ ಮಾಡಿದ್ದಾಗಿ, ಆ ಗಾಲಟೆಯನ್ನು ಬಿಡಿಸಲು ತಾವು ಮಧ್ಯೆ ಹೋದಾಗ ಆರೋಪಿತರೆಲ್ಲರೂ ತಮಗೆ ಒದ್ದು, ತಮ್ಮನ್ನು ಜೋರಾಗಿ ನೂಕಿದ್ದರಿಂದ ತಾವು ಬಾಗಿಲ ಬಳಿ ಇದ್ದ ಟೀಪಾಯಿ ಮೇಲ ಬಿದ್ದಾಗ ತಮ್ಮ ಹೊಟ್ಟೆಗೆ ಪೆಟ್ಟು ಬಿದ್ದು ತಮಗೆ ಗರ್ಭಪಾತವಾಗಿದ್ದಾಗಿ, ನಂತರ ಆರೋಪಿತರೆಲ್ಲರೂ ತಮ್ಮನ್ನು ಮನೆಯಿಂದ ಹೊರ ನೂಕಿ ಬಾಗಿಲು ಹಾಕಿಕೊಂಡಿದ್ದಾಗಿ, ತಮಗೆ ಬಹಳ ರಕ್ತಸ್ರಾವವಾಗುತ್ತಿದ್ದರಿಂದ ತಮ್ಮ ತಂದೆ ತಾಯಿ ತಮ್ಮನ್ನು ತಿಪಟೂರಿನ ತಾರಾದೇವಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ಅಲ್ಲಿ ವೈದ್ಯರು ತಮಗೆ ಗರ್ಭಪಾತವಾಗಿರುದಾಗಿ ತಿಳಿಸಿ ಚಿಕಿತ್ಸೆ ನೀಡಿ ಕಳುಹಿಸಿದ್ದಾಗಿ, ತದ ನಂತರ ತಮ್ಮ ತಂದೆ ತಾಯಿ ತಮ್ಮನ್ನು ಬಳ್ಳೇಕಟ್ಟೆಯ ಅವರ ಮನೆಗೆ ಕರೆದುಕೊಂಡು ಹೋಗಿದ್ದಾಗಿ, ತಾವು ಗುಣಮುಖವಾದ ನಂತರ ತಮಗೆ ಗರ್ಭಪಾತವಾದ ವಿಚಾರವನ್ನು ತಮ್ಮ ತಂದೆ ತಾಯಿ ಆರೋಪಿತರಿಗೆ ಫೋನ್ ಮೂಲಕ ತಿಳಿಸಿದಾಗಿ 1ನೇ ಆರೋಪಿ ತಮ್ಮ ಮನೆಯ ಮುಂಭಾಗ ಬಂದು ತಮ್ಮನ್ನು ವಿಚಾರಿಸಿ ವೈಧ್ಯರ ಸಲಹೆ ಚೀಟಿಯನ್ನು ನೀಡುವಂತೆ ಕೇಳಿದ್ದು, ತಾವು ಅಂನ್ನು ನೀಡಿದಾಗಿ ಹರಿದು ಹಾಕಿದ್ದಾಗಿ, ತಾವು ಆ ಬಗ್ಗೆ ವಿಚಾರಿಸಿದಾಗಿ ಮಗು ಹೋದ ಮೇಲೆ ಚೀಟಿಯ ಅವಶ್ಯಕತೆ ಏನಿದೆ, ನೀನು ರೆಸ್ಟ್ ತಕೋ ನಂತರ ತಮ್ನನ್ನು ಕರೆದುಕೊಂಡು ಹೋಗಿ ಚೆನ್ನಾಗಿ ನೋಡಿಕೊಳ್ಳುವುದಾಗಿ ತಿಳಿಸಿ ಹೋರಟು ಹೋಗಿದ್ದಾಗಿ, ನಂತರ 1ನೇ ಆರೋಪಿ ಬಂದು ತಮ್ಮನ್ನು ಕರೆದುಕೊಂಡು ಹೋಗದ ಕಾರಣ ತಮ್ಮ ತಂದೆ ತಾಯಿ ಆರೋಪಿತರಿಗೆ ಫೋನ್ ಮಾಡಿ ತಮ್ಮನ್ನು ಕರೆದುಕೊಂಡು ಹೋಗುವಂತೆ ತಿಳಿಸಿದಾಗಿ ಆರೋಪಿತರು 5 ಲಕ್ಷ ಹಣ ಕೊಡುವವರೆಗೂ ತಾವು ಆಕೆಯನ್ನು ಕರೆದುಕೊಂಡು ಹೋಗುವುದಲ್ಲವಾಗಿ ತಿಳಿಸಿ ನಂತರ ತಮ್ಮ ತಂದೆ ತಾಯಿ ಖುದ್ದಾಗಿ ಆರೋಪಿತರ

ಮನೆಗೆ ಹೋಗಿ ತಮ್ಮನ್ನು ಕರೆದುಕೊಂಡು ಹೋಗುವಂತೆ ಕೇಳಿದಾಗ ಆರೋಪಿತರು ಅವರನ್ನು ಮನೆಯ ಒಳಗೆ ಸೇರಿಸದೇ **5** ಲಕ್ಷ ರೂ ತಂದು ಕೊಟ್ಟರೆ ಮಾತ್ರ ತಮ್ಮ ಮಗಳನುನ ಸೇರಿಸಿ ಕೊಳ್ಳುವುದಾಗಿ**,** ಇಲ್ಲವಾದರೆ ನಮಗೆ ಇನ್ನೂ ಹೆಚ್ಚಿನ ವರದಕ್ಷಿಣೆ ಕೊಡುವವರಿದ್ದಾರೆಂದು ಹೇಳಿ ಕಳುಹಿಸ್ಸಿದಾಗಿ**,** ನಂತರ ತಮ್ಮ ತಂದೆ ತಾಯಿ ಪಂಚಾಯಿತಿ ಮಾಡಲು ಪ್ರಯತ್ನಿಸಿದ್ದು ಯಾವುದೇ ಸಫಲವಾಗಿರುವುದಿಲ್ಲವಾಗಿ ನಂತರ **1**ನೇ ಆರೋಪಿಯು ವಿವಾಹ ವಿಚ್ಚೇದನಕ್ಕಾಗಿ ಅರ್ಜಿ ಅಲ್ಲಿಸಿದ್ದಾಗಿ ನಂತರ ತಾವು ಆರೋಪಿತರ ವಿರುದ್ದ ನೊಣವಿನಕೆರೆ ಪೋಲೀಸ್ ಠಾಣೆಯಲ್ಲಿ ವರದಕ್ಷಿಣೆ ಕಿರುಕುಳದ ದೂರು ಸಲ್ಲಿಸಿದ್ದಾಗಿ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರಃ- ಆರೋಪಿ ನಂ.1 ಸುಳ್ಳು**
**ಆರೋಪಿ ನಂ.2 ಸುಳ್ಳು**
**ಆರೋಪಿ ನಂ.3 ಸುಳ್ಳು**

ಪ್ರಶ್ನೆ**:3** ಪ್ರಾಸಾ**-2** ಷಡಾಕ್ಷರಯ್ಯ ರವರು ತಮ್ಮ ಸಾಕ್ಷ್ಯದಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿತರು ತಮ್ಮ ಬೀಗರು ಹಾಗೂ ಅಳಿಯಆಗಬೇಕು**,** ಚಾಸಾ**-1** ತಮ್ಮ ಮಗಳಾಗಬೇಕು**,** ದಿಃ **25.07.2012** ರಂದು ಚಾಸಾ**-1** ಹಾಗೂ **1**ನೇ ಆರೋಪಿ ವೇದಾನಂದನಿಗೆ ವಿವಾಹ ಆಗಿದ್ದಾಗಿ**,** ಸದರಿ ವಿವಾಹವು ತಿಪಟೂರು ಟೌನ್ ಗುರುಕುಲ ಕಲ್ಯಾಣ ಮಂಟಪದಲ್ಲಿ ಆಗಿದ್ದಾಗಿ**,** ಮದುವೆಗೆ ಮುಂಚೆ ತಮ್ಮ ಹಾಗೂ ಆರೋಪಿತರ ಕುಟುಂಬದವರೊಂದಿಗೆ ಮಾತುಕತೆ ಆಗಿದ್ದಾಗಿ**,** ಮಾತುಕತೆ ಆದಾಗ **150** ಗ್ರಾಂ ಚಿನ್ನದ ವಡವೆ**,** ಅದೇ ರೀತಿಯಾಗಿ **1**ನೇ ಆರೋಪಿಗೆ **54** ಗ್ರಾಂ ಚಿನ್ನ ಕೊಡಬೇಕೆಂದು ಮಾತುಕತೆ ಆಗಿದ್ದಾಗಿ**,** ಅದೇ ರೀತಿಯಾಗಿ **1** ಕೆ ಜಿ ಬೆಳ್ಳಿ ತಟ್ಟೆ ಹಾಗೂ ಬೆಳ್ಳಿ ಚೊಂಬು ಕೊಡಬೇಕೆಂದು ಮಾತುಕತೆ ಆಗಿದ್ದಾಗಿ**,** ಮೇಲೆ ಹೇಳಿದ ಎಲ್ಲಾ ವಸ್ತುಗಳನ್ನು ಕೊಟ್ಟು ಮದುವೆಯನ್ನು ಮಾಡಿಕೊಟ್ಟಿದ್ದಾಗಿ**,** ತಮ್ಮ ಮಗಳು ಮದುವೆಯಾದ ನಂತರ ತನ್ನ ಗಂಡನ ಮನಗೆ ಹೋಗಿದ್ದಾಗಿ**,** ಮದುವೆಯಾದ ನಂತರ **10** ತಿಂಗಳ ಕಾಲ ಚೆನ್ನಾಗಿ ಇದ್ದಿದ್ದಾಗಿ**,** ಆದಾದ ನಂತರ ಒಂದು ದಿನ ರಾತ್ರಿ **10** ಗಂಟೆಯಲ್ಲಿ ತಮಗೆ ಫೋನ್ ಮಾಡಿ **1**ನೇ ಆರೋಪಿ ಫ್ಲೇವುಡ್ ಅಂಗಡಿಯನ್ನು ಹಾಕಲು **5** ಲಕ್ಷ ವರದಕ್ಷಿಣೆ ತರುವಂತೆ ಹೇಳುತ್ತಿದ್ದರೆಂದು ತಮಗೆ ತಿಳಿಸಿದ್ದಾಗಿ**,** ಅದೇ ರೀತಿಯಾಗಿ ತಮ್ಮ ಭಾಮೈದುನನಿಗೆ ತಮ್ಮ ಮಗಳನ್ನು ಹೊಡೆದು ಮನೆಯಿಂದ ಹೊರ ನಿಲ್ಲಿಸಿದ್ದಾಗಿ ಹಾಗೂ ಹಣ ತರಲು ಹೇಳುತ್ತಿರುತ್ತಾರೆಂದು ತಾವು ತಿಳಿಸಿದ್ದಾಗಿ ತಾವು ತಮ್ಮ ಭಾಮೈದುನ**,** ತಮ್ಮ ನಾದಿನಿ ಲತಾ**,** ಶಿವಶಂಕರಯ್ಯ ಎಲ್ಲರೂ ಕೂಡಿಕೊಂಡು ಬೆಳಗ್ಗೆ **10** ಗಂಟೆ ಸಮಯಕ್ಕೆ ನೊಣವಿನಕೆರೆಗೆ ಹೋಗಿ ಆರೋಪಿತರನ್ನು ಕುರಿತು ಎಲ್ಲವನ್ನು ಕೊಟ್ಟು ವಿವಾಹ ಮಾಡಿದ್ದಾಗಿ ಈಗ ಯಾವ

ಕಾರಣದಿಂದ ಕಿರುಕುಳ ನೀಡುತ್ತಿದ್ದಿರೆಂದು ಕೇಳಲಾಗಿ ಆರೋಪಿತರು ನ್ಯಾಯವನ್ನು ಕೇಳಲು ಹೋದ ತಮಗೆ ಹಲ್ಲೆ ಮಾಡಿದ್ದಾಗಿ, ಆ ಸಂದರ್ಭದಲ್ಲಿ ತಮ್ಮ ಮಗಳು ತಮ್ಮ ತಂದೆಯನ್ನು ಏಕೆ ಹೊಡೆಯುತ್ತಿದ್ದಿರೆಂದು ಅಡ್ಡ ಬಂದ ಸಂದರ್ಭದಲ್ಲಿ ಆರೋಪಿತರು ತಮ್ಮ ಮಗಳಿಗೆ ಹೊಡೆದು ನೂಕಿದಾಗ ತಮ್ಮ ಮಗಳು ಟೇಬಲ್ ನ ಮೇಲೆ ಬಿದು ಪ್ರಜ್ಞೆಯನ್ನು ತಪ್ಪಿದ್ದಾಗಿ, ಆ ಸಂದರ್ಭದಲ್ಲಿ ತಮ್ಮ ಮಗಳು ಗರ್ಭಿಣಿಯಾಗಿದ್ದಾಗಿ, ನಂತರ ತಮ್ಮ ಮಗಳನ್ನು ತಿಪಟೂರು ತಾರಾದೇವಿ ಆಸ್ಪತ್ರೆಗೆ ಕರೆದುಕೊಂಡು ಬಂದಾಗ ವೈದ್ಯರು ಮಗು ಮೃತಪಟ್ಟಿದ್ದಾಗಿ ತಿಳಿಸಿಸಿ ನಂತರ 15 ದಿನಗಳು ಕಳೆದು ತಮ್ಮ ಮಗಳನ್ನು ಕರೆದುಕೊಂಡು ಹೋಗುವಂತೆ ಹೇಳಿದಾಗ 1ನೇ ಆರೋಪಿ 5 ಲಕ್ಷ ತೆಗೆದುಕೊಂಡು ಬಂದರೆ ಕರೆದುಕೊಂಡು ಹೋಗುವುದಾಗಿ ನಂತರ ತಾವು ತಮ್ಮ ಹೆಂಡತಿ ತಮ್ಮ ಮಗಳನ್ನು ಕರೆದುಕೊಂಡು ಆರೋಪಿತರ ಮನೆಗೆ ಹೋಗಿದ್ದಾಗಿ, ಮಗಳನುನ ಕರೆದುಕೊಂಡು ಹೋದ ದಿನ ಆರೋಪಿತರು 5 ಲಕ್ಷ ಹಣ ತಂದಿನಿದ್ದೀರಾ ಎಂದು ಪ್ರಶ್ನಿಸಿ ತಾವು ಇಲ್ಲ ಎಂದು ತಿಳಿಸಿದಾಗ ಬಾಗಿಲು ಹಾಕಿದ್ದಾಗಿ ನಂತರ ತಮ್ಮ ಮಗಳನ್ನು ತಮ್ಮ ಮನೆಗೆ ಕರೆದುಕೊಂಡು ಬಂದಿದ್ದಾಗಿ, 4 ದಿನ ಕಳೆದು ತಮ್ಮ ಮಗಳಿಗೆ ವಿವಾಹ ವಿಚ್ಚೇಧನಾ ಕೋರಿ ನೋಟೀಸು ಕುಳುಹಿಸಿದ್ದಾಗಿ, ನಂತರ ತಾವು ಪೋಲೀಸ್ ಠಾಣೆಗೆ ಹೋಗಿ ಪಿರ್ಯಾದು ನೀಡಿದ್ದಾಗಿ ಎಂದು ಸಾಕ್ಷವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರಃ- ಆರೋಪಿ ನಂ.1 ಸುಳ್ಳು**
**ಆರೋಪಿ ನಂ.2 ಸುಳ್ಳು**
**ಆರೋಪಿ ನಂ.3 ಸುಳ್ಳು**

ಪ್ರಶ್ನೆಃ 4- ಪ್ರಾಸಾ- 3 ಗೌರಮ್ಮ ಇವರು ತಮ್ಮ ಸಾಕ್ಷ್ಯದಲ್ಲಿ 1ನೇ ಆರೋಪಿ ತಮ್ಮ ಅಳಿಯ, 2 ಮತ್ತು 3ನೇ ಆರೋಪಿತರು ತಮ್ಮ ಬೀಗರು, ಚಾಸಾ-1 ತಮ್ಮ ಮಗಳಾಗಬೇಕು, 1ನೇ ಆರೋಪಿಗೆ ಕೊಟ್ಟು ವಿವಾಹ ಮಾಡಿದ್ದಾಗಿ, ಮದುವೆ ಮುಂಚಿತವಾಗಿ ಮಾತುಕತೆ ನಡೆದಿದ್ದು ತಮ್ಮ ಮಗಳಿಗೆ 150 ಗ್ರಾಂ ಚಿನ್ನ, 1ನೇ ಆರೋಪಿಗೆ 54 ಗ್ರಾಂ ಚಿನ್ನ ಹಾಗೂ 1 ಕೆ ಜಿ ಬೆಳ್ಳಿ ತಟ್ಟೆ ಚೊಂಬು ಹಾಗೂ 1.50 ಲಕ್ಷ ವರದಕ್ಷಿಣೆ ಕೇಳಿದ್ದಾಗಿ, ನಂತರ ತಿಪಟೂರಿನ ಗುರುಕುಲ ಕಲ್ಯಾಣ ಮಂಟಪದಲ್ಲಿ ತಮ್ಮ ಮಗಳನ್ನು ಕೊಟ್ಟು ಮದುವೆ ಮಾಡಿದ್ದಾಗಿ, ನಂತರ ಮದುವೆ ಆದ 10 ತಿಂಗಳ ವರೆಗೆ ಅವರು ಚೆನ್ನಾಗಿ ಇದ್ದಿದ್ದಾಗಿ, ನಂತರ ಅವರ ಅತ್ತೆ ಮಾವ ಅವರ ಮಾತುಕಟ್ಟಿಕೊಂಡು 1ನೇ ಆರೋಪಿ ಮತ್ತು ಎಲ್ಲಾರೂ ಸೇರಿ ತಮ್ಮ ಮಗಳಿಗೆ ಹಿಂಸೆ ಕೊಡುತ್ತಿದ್ದಾಗಿ, ತಮ್ಮ ಮಗಳಿಗೆ 5 ಲಕ್ಷ ಹೆಚ್ಚಿನ ವರದಕ್ಷಿಣೆ ತೆಗೆದುಕೊಂಡು ಬರಲು ಒತ್ತಾಯಿಸುತ್ತಿದ್ದಿದ್ದಾಗಿ ಮತು ಮನೆಯಿಂದ ಹೊರಗೆ ಹಾಕಿದ್ದಾಗಿ ಮತ್ತು ತಮ್ಮ ಮಗಳು ಫೋನಿನ ಮುಖಾಂತರ ತಮಗೆ ಈ ರೀತಿ ಹಿಂಸೆ ಕೊಡುವ ಬಗ್ಗೆ

ಹೇಳಿದ್ದಾಗಿ, ಸದರಿ ಫೋನ್ ಮಾಡಿದ ವಾರದ ನಂತರ ತಮ್ಮ ಮಗಳನ್ನು ಹೆಚ್ಚಿನ ವರದಕ್ಷಿಣೆ ಬಗ್ಗೆ ಹೊಡೆಬಡೆ ಮಾಡಿ ರಾತ್ರಿ ಸಮಯದಲ್ಲಿ ಹೊರಗಡೆ ಹಾಕಿದ್ದಾಗಿ, ನಂತರ ತಮ್ಮ ತಮ್ಮನಾದ ಚಾಸಾ-5 ರವರಿಗೆ ವಿಷಯ ತಿಳಿಸಿ ಬೆಳಗ್ಗೆ ತಮ್ಮ ಮಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಅವರ ಮನೆಗೆ ಹೋಗಿದ್ದಾಗಿ, ಅವರ ಗರ್ಬಿಣಿ ಆಗಿದ್ದಾಗಿ ಈ ವಿಷಯವನ್ನು ತಮಗೆ ತಮ್ಮ ಮಗಳು ತಳಿಸಿದ್ದಾಗಿ, ತಾವು ಮತ್ತು ತಮ್ಮ ಯಜಮಾನರು ಹಾಗೂ ಚಾಸಾ-4-5 ರವರು ಹೋಗಿದ್ದಾಗಿ, ಬೆಳಗ್ಗೆ 10.00 ಗಂಟೆಗೆ ಆರೋಪಿತರ ಮನೆಗೆ ಹೋಗಿದ್ದಾಗಿ, ಆ ಸಮಯದಲ್ಲಿ ಅವರ ಮನೆಯಲ್ಲಿ 7-10 ಜನ ನಿಂತಿದ್ದಾಗಿ, ನಾವು ಹೋಗಿ ನೋಡಲು ತಮ್ನ ಮಗಳನ್ನು ಹೊಡೆದಿದ್ದಾಗಿ, ತಮ್ನ ಮಗಳಿಕೆ ಕೈ ಮತ್ತು ತಲೆಗೆ ಪೆಟ್ಟಾರಿದ್ದಾಗಿ, ನಂತರ ತಾವು ನೀಮಗೆ ಎಲ್ಲನೂ ಕೊಟ್ಟಿದ್ದರು ಅದರ ಸಾಲ ಇನೂ ತೀರಿಸಿರುವುದಿಲ್ಲ ಆದರೂ ಸಹ ತಮ್ಮ ಮಗಳಿಗೆ ಏಕೆ ಹೊಡೆದ್ದೀರಾ ಎಂದು ಕೇಳಿದ್ದಕ್ಕೆ ಆರೋಪಿತರು ತಮ್ಮನ್ನು ಹೊಡೆದ್ದಿದ್ದಾಗಿ, ಈ ಹೊಡೆಯುವ ಸಮಯದಲ್ಲಿ ತಮ್ಮ ಮಗಳನು ತಮ್ಮನ್ನು ಬಿಡಿಸಲು ಬಂದಾಗ ಆರೋಪಿತರು ತಮ್ಮ ಮಗಳನ್ನು ಹೊಡೆದು ನೂಕಿದ್ದಾಗಿ ಪರಿಣಾಮ ಟೀಪಾಯಿ ಮೇಲೆ ತಮ್ಮ ಮಗಳು ಬಿದ್ದು ಹೊಟ್ಟೆಗೆ ಏಟು ಬಿದ್ದು ತಾವು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ ವೈದ್ಯರು ಹೊಟ್ಟೆಯಲ್ಲಿರುವ ಮಗು ಸತ್ತುಹೋಗಿದೆ ಎಂದು ಹೇಳಿ ತಮ್ಮ ಮಗಳನ್ನು ಉಪಚರಿಸಿ ಕಳುಹಿಸಿದ್ದಾಗಿ, ನಂತರ ತಾವು ತಮ್ಮ ಮಗಳನ್ನು ತಮ್ಮ ಮನೆಗೆ ಕರೆದುಕೊಂಡು ಬಂದಿದ್ದಾಗಿ, ನಂತರ ತಾವು ಆರೋಪಿತರಿಗೆ ಫೋನ್ ಮಾಡಿ ತಮ್ಮ ಮಗಳನ್ನು ಚೇತರಿಸಿಕೊಂಡಿದುದ ಕರೆದುಕೊಂಡು ಹೋಗಿ ಎಂದು ಕೇಳಿದ್ದಕ್ಕೆ, ಆರೋಪಿತರು ತಾವು ಕರೆದುಕೊಂಡು ಹೋಗಲಿಕೆ ರೂ. 5 ಲಕ್ಷ ಹಣ ಕೊಡಬೇಕೆಂದು ಬೇಡಿಕೆ ಇಟ್ಟಿದ್ದು, ಸ್ವಲ್ಪ ದಿನಗಳ ನಂತರ ತಾವೇ ತಮ್ಮ ಮಗಳನ್ನು ಆರೋಪಿತರ ಮನೆಗೆ ತಾವು ಮತ್ತು ಚಾಸಾ-2 ರವರು ಕರೆದುಕೊಂಡು ಹೋಗಿದ್ದಾಗಿ, ನಂತರ ಆರೋಪಿತರು ಬಾಗಿಲಲ್ಲೇ ನಿಂತು ಹಣ ತಂದಿದ್ದೀರಾ ಎಂದು ಕೇಳಿದ್ದು ಇಲ್ಲ ಎಂದು ಹೇಳಿದ್ದಕ್ಕೆ ತಮ್ಮ ಮಗಳನ್ನು ತಾವೇ ಕರೆದುಕೊಂಡು ಹೋಗಿ ಎಂದು ಹೇಳಿದ್ದಾಗಿ, ನಂತರ ತಾವು ತಮ್ಮ ಮನೆಗೆ ಕರೆದುಕೊಂಡು ಬಂದಿದ್ದಾಗಿ, ಸ್ವಲ್ಪ ದಿನಗಳ ನಂತರ ತಮ್ಮ ಮಗಳಿಗೆ ಡೈವರ್ಸ್ ನೋಟೀಸಿ ಕಳುಹಿಸಿದ್ದಾಗಿ, ಆನಂತರ ಹೋಗಿ ತಾವು ಪೋಲೀಸ್ ಠಾಣೆಗೆ ಹೋಗಿ ಪಿರ್ಯಾದು ನೀಡಿದ್ದಾಗಿ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ **?**

**ಉತ್ತರಃ- ಆರೋಪಿ ನಂ.1 ಸುಳ್ಳು**

**ಆರೋಪಿ ನಂ.2 ಸುಳ್ಳು**

**ಆರೋಪಿ ನಂ.3 ಸುಳ್ಳು**

ಪ್ರಶ್ನೆಃ 5 ಪ್ರಾಸಾ-4 ಶಿವಶಂಕರಯ್ಯ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿತರು ಗೊತ್ತು, ಆರೋಪಿತರಿಗೂ ತಮಗೆ

ಸಂಬಂಧಿಕರು. ಚಾಸಾ-1 ತಮ್ಮ ಅಣ್ಣನ ಮಗಳು, ಚಾಸಾ-2 ತಮ್ಮ ಅಣ್ಣ, ಚಾಸಾ-3 ತಮ್ಮ ಅತ್ತಿಗೆ, ತಾವು ಪುರೋಹಿತ ಕೆಲಸವನ್ನು ಈಗ ಸುಮಾರು 38 ವರ್ಷಗಳಿಂದ ಮಾಡುತ್ತಿದ್ದಿದ್ದಾಗಿ, ದಿನಾಂಕ 25.07.202 ರಂದು ತಿಪಟೂರು ಟೌನ್ ಗುರುಕುಲ ಕಲ್ಯಾಣ ಮಂಟಪದಲ್ಲಿ ಚಾಸಾ-**1** ಮತ್ತು **1**ನೇ ಆರೋಪಿ ರವರ ಮದುವೆಯಾಗಿದುದ**,** ಮದುವೆ ಮುಂಚೆ ಮಾತುಕತೆಯಾಗಿದ್ದಾಗಿ**,** ಮಾತುಕತೆಯಲ್ಲಿ ತಾವು ಚಾಸಾ**5, 6, 3, 2** ಮತ್ತು ಚಾಸಾ-**1** ರವರು ಹಾಜರಿದ್ದಾಗಿ**,** ಮತ್ತು ಜೊತೆಯಲ್ಲಿ ಮಾತುಕತೆಗೆ ಬಂದ ವ್ಯಕ್ತಿಗಳು ಆರೋಪಿತರು ಹಾಜರಿದ್ದಾಗಿ**,** ಚಾಸಾ-**2** ತಮ್ಮನ್ನು ಮಾತುಕತೆಗೆ ಕರೆದಿದ್ದಾಗಿ**,** ಮಾತುಕತೆಯಲ್ಲಿ ವರನಿಗೆ **54** ಗ್ರಾಂ ಚಿನ್ನ**,** ತಟ್ಟೆ ಬೆಳ್ಳಿ ಚೊಂಬು ಮತ್ತು **1.5** ಲಕ್ಷ ಹಣ ಕೇಳಿದ್ದಾಗಿ**,** ತಾವು ಎಲ್ಲವನ್ನು ಕೊಟ್ಟು ಮದುವೆ ಮಾಡಿದ್ದಾಗಿ**,** ಚಾಸಾ-**1** ರವರಿಗೆ **150** ಗ್ರಾಂ ಚಿನ್ನ ಕೊಟ್ಟು ಗುರು ಹಿರಿಯರ ಸಮಕ್ಷಮ ಮದುವೆ ಮಾಡಿಕೊಟ್ಟಿದ್ದಾಗಿ**,** ತಾವು ಹೆಣ್ಣಿನ ಚಿಕ್ಕಪ್ಪನಾಗಿ ಓಡಾಡಿಕೊಂಡು ಮದುವೆ ಮಾಡಿದ್ದಾಗಿ**,** ಮದುವೆ ಆದ ನಂತರ ಚಾಸಾ-**1** ಗಂಡನ ಮನೆಗೆ ಹೋಗಿದ್ದಾಗಿ**,** ಮದುನೆಯಾದ ನಂತರ **10** ತಿಂಗಳು ಚಾಸಾ-**1** ಮತ್ತು **1**ನೇ ಆರೋಪಿ ಚೆನ್ನಾಗಿದ್ದಾಗಿ**,** ನಂತರ ಆರೋಪಿತರು **5** ಲಕ್ಷ ಬೇಡಿಕೆಯನ್ನು ಇಟ್ಟಿದ್ದಾಗಿ**,** ಈ ಸಂಬಂಧ ಚಾಸಾ-**2** ರವರು ತಮಗೆ ಕರೆ ಮಾಡಿ ಈ ರೀತಿ ಬೇಡಿಕೆ ಇಟ್ಟಿದ್ದಾರೆ ಹೋಗಿ ಪಂಚಾಯಿತಿ ಮಾಡೋಣ ಎಂದು ಕರೆದಿದ್ದಾಗಿ**,** ಈ ಸಂಬಂಧಿ ತಾವು ಹಾಗೂ ಚಾಸಾ-**2** ಮತ್ತು **3** ಪಂಚಾಯಿತಿ ಮಾಡಲು ಆರೋಪಿಯ ಮನೆಗೆ ಹೋದಾಗ ಆರೋಪಿತರು ಚಾಸಾ-**1** ರವರಿಗೆ ಹೊಡೆದಿದ್ದಾಗಿ**,** ನಂತರ ತಮಗೂ ಹೊಹೊಡೆದಿದ್ದಾಗಿ**,** ಆ ಸಮಯದಲ್ಲಿ ಚಾಸಾ-**1** ಗಲಾಟೆ ಬಿಡಿಸಲು ಬಂದಾಗ ಚಾಸಾ-**1** ರವರನ್ನು **1**ನೇ ಆರೋಪಿ ನೂಕಿದ್ದು ಆಗ ಆಕೆ ಗರ್ಭಿಣಿಯಾಗಿದ್ದು ಆಕೆ ಟಿಪಾಯಿ ಮೇಲೆ ಬಿದ್ದು ಜ್ಞಾನ ತಪ್ಪಿದ್ದಾಗಿ**,** ನಂತರ ಚಾಸಾ-**1** ಮತ್ತು **3** ರವರು ಚಾಸಾ-**1** ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ**,** ತಾವು ತಮ್ಮ ಮನೆಗೆ ಹೋಗಿದ್ದಾಗಿ**,** ನಂತರ ಅದೇ ದಿನ ಸಂಜೆ **5** ಕ್ಕೆ ಫೋನಿನ ಮೂಲಕ ಚಾಸಾ-**5** ಕ್ಕೆ ಕರೆ ಮಾಡಿದ್ದು ಅವರು ಹೊಟ್ಟೆಯಲಿಲರುವ ಮಗು ತೀರಿಹೋಗಿದೆ ಎಂದು ತಿಳಿಸಿದ್ದಾಗಿ**,** ತಾವು ಪಂಚಾಯಿತಿ ಮಾಡಲು ಹೋದಾಗ ಈ ರೀತಿ ಮಾಡಬೇಡಿ ಎಂದು ಹೇಳಿದಾಗ ಆರೋಪಿತರು **5** ಲಕ್ಷ ಹಣ ಕೊಟ್ಟರೆ ತಮ್ಮ ಮಗಳು ಇರಬಹುದು ಇಲ್ಲದಿದ್ದರೆ ಮಗಳನ್ನು ಕರೆದುಕೊಂಡು ಹೋಗಿ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದಾಗಿ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರಃ- ಆರೋಪಿ ನಂ.1 ಸುಳ್ಳು**
**ಆರೋಪಿ ನಂ.2 ಸುಳ್ಳು**
**ಆರೋಪಿ ನಂ.3 ಸುಳ್ಳು**

ಪ್ರಶ್ನೆ:6  ಪ್ರಾಸಾ-5  ಸಿದ್ದಲಿಂಗಮೂರ್ತಿ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿತರ ಪರಿಚಯ ತಮಗೆ ಇದ್ದು, ಆರೋಪಿತರು ತಮನಗೆ ಗೊತ್ತಿದ್ದಾಗಿ, ಅವರನ್ನು ತಾವು ನೋಡಿದ್ದಾಗಿ, ಆರೋಪಿ 1 ಅಕ್ಕನ ಮಗಳಾದ ಪವಿತ್ರಾಳ ಗಂಡ, ಆರೋಪಿ 2 ಮತ್ತು 3 ರವರು ಪವಿತ್ರಾಳ ಅತ್ತೆ ಮಾವ ಆಗಿದ್ದಾಗಿ, ಚಾಸಾ-2 ತಮ್ಮ ಅಕ್ಕನ ಗಂಡ. ದಿ ಃ 25.07.2012 ರಲ್ಲಿ ಆರೋಪಿ 2 ಮತ್ತು 3 ರವರು ಚಾಸಾ-1 ರವರ ತಂದೆ ತಾಯಿಯವರ ಬಳಿಯಲ್ಲಿ ಚಾಸಾ-1 ರವರನ್ನು ಕೊಟ್ಟು ಮದುವೆ ಮಾಡುವಂತೆ ಕೇಳಿಕೊಂಡಿದ್ದಾಗಿ, ತಾವು ಅದಕೆಕ ಒಪ್ಪಿಕೊಂಡಿದ್ದಾಗಿ, ಅದರಂತೆ ಮದುವೆಗೆ ಮಾತುಕತೆ ಎಂದು  ಆರೋಪಿತರು ತಾವು ತಮ್ಮ ಮಾವ ಚಾಸಾ-2 ಶಿವಶಂಕರಯ್ಯ ರವರು ಬಳ್ಳೆಕಟ್ಟೆಯ ಚಾಸಾ-2 ರವರ ಮನೆಯಲ್ಲಿ ಮಾತುಕತೆಯನ್ನು ಮಾಡಿದ್ದಾಗಿ, ಮಾತುಕತೆಯಲ್ಲಿ 1ವರೆ ನಗದು ಮತ್ತು ಆರೋಪಿ 1 ರವರಿಗೆ ಒಟ್ಟು 54 ಗ್ರಾಂ ಚಿನ್ನ ಒಂದು ಕೊರಳ ಸರ, ಬ್ರಾಸ್ ಲೈಟ್ ಮತ್ತು ಉಂಗುರ ಸೇರಿ ಒಟ್ಟು 54ಗ್ರಾಂ ಬಂಗಾರ. ಅದೇ ರೀತಿ ಚಾಸಾ-1 ರವರಿಗೆ ಒಟ್ಟು 150 ಗ್ರಾಂ ಚಿನ್ನ ಕೊಡಬೇಕೆಂದು ಮಾತುಕತೆ ಆಗಿದ್ದಾಗಿ, ನಂತರ ಆರೋಪಿ 1 ರವರಿಗೆ ಚಾಸಾ-1 ರವರನ್ನು ಕೊಟ್ಟು ಮಾತುಕತೆಯಲ್ಲಿ ತೀರ್ಮಾನವಾದ ಎಲ್ಲಾ ವಸ್ತುಗಳನ್ನು ನೀಡಿ 2012 ಲ್ಲಿ ಮದುವೆ ಮಾಡಿಕೊಟ್ಟಿದ್ದಾಗಿ, ಮದುವೆಯಾದ 10 ತಿಂಗಳು ಚಾಸಾ-1 ಮತ್ತು ಆರೋಪಿತರು ಚೆನ್ನಾಗಿ ಇದ್ದು, 10 ತಿಂಗಳ ನಂತರ  ಆರೋಪಿತರು ಚಾಸಾ-1 ರವರಿಗೆ 5 ಲಕ್ಷ ಹಣವನ್ನು ಕೇಳಿ ಅದನ್ನು ತರುವಂತೆ ಹೊಡೆದಿದ್ದಾಗಿ, ಆದ್ದರಿಂದ ತಮ್ಮ ಅಕ್ಕ ತಮಗೆ ದೂರವಾಣಿ ಕರೆ ಮಾಡಿ ಸದರಿ ವಿಚಾರವನ್ನು ತಮಗೆ ತಿಳಿಸಿದ್ದಾಗಿ, ಅದರಂತೆ ತಾವು  ಆರೋಪಿತರ ಊರಿಗೆ ಹೋಗಿ ಸಮಾದಾನ ಮಾಡಿ ಬಂದಿದ್ದಾಗಿ, ನಂತರ 2 ದಿನಗಳ ನಂತರ ಪುನಃ  ಆರೋಪಿತರು ಗಲಾಟೆ ಮಾಡಿಕೊಂಡಿದುದ ತಮಗೆ ದೂರವಾಣಿ ಕರೆ ಮಾಡಿದ್ದಾಗಿ,

ತಾವು ಮರುದಿನ ಬೆಳಗ್ಗೆ 10 ಗಂಟೆ ಸಮಯದಲ್ಲಿ ತಾವು ಮತ್ತು ತಮ್ಮ ತಂಗಿ ಚಾಸಾ-6 ಲತಾ ಆರೋಪಿತರ ಮನೆಗೆ ಹೋದಾಗ ಅವರ ಮನೆಯಲ್ಲಿ 5 ರಿಂದ 6 ಜನ ಕುಳಿತುಕೊಂಡಿದ್ದಾಗಿ, ತಾವು ಏತಕ್ಕೆ ಹೊಡೆದಿದ್ದೀಯಾ ಎಂದು ಕೇಳಿದ್ದಕ್ಕೆ ಆರೋಪಿತರು ತಮಗೆ ಮತ್ತು ಚಾಸಾ-6 ರವರಿಗೆ ಹೊಡೆದಿದ್ದು ಮಧ್ಯದಲ್ಲಿ ಚಾಸಾ-1 ರವರು ಬಂದು ಬಿಡಸಿಕೊಳ್ಳಲು ಬಂದಾಗ ಚಾಸಾ-1 ಪವಿತ್ರಾ ರವರಿಗೆ ಆರೋಪಿತರು ನೂಕಿದಾಗ ಚಾಸಾ-1 ರವರು 3 ತಿಂಗಳ ಗರ್ಭಿಯಾಗಿದ್ದಾಗಿ ಟೀಪಾಯಿಯ ಮೇಲೆ ಬಿದಿದ್ದಾಗಿ, ಆದ್ದರಿಂದ ಚಾಸಾ-1 ರವರಿಗೆ ಹೊಟ್ಟೆಗೆ ಪೆಟ್ಟು ಬಿದುದ ಜ್ಞಾನ ತಪ್ಪಿದ್ದಾಗಿ, ತಾವು ಮತ್ತು ಚಾಸಾ-7 ರವರು ಚಾಸಾ-1 ರವರನ್ನು ಕರೆದುಕೊಂಡು ತಾರಾದೇವಿ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ಕೊಡಿಸಿದ್ದಾಗಿ, ಆಸ್ಪತ್ರೆಯಲ್ಲಿ ವೈದ್ಯರು ಹೊಟ್ಟೆಯಲ್ಲಿನ ಮಗು ಸತ್ತು ಹೋಗಿದೆಂದು ತಿಳಿಸಲಾಗಿ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರಃ- ಆರೋಪಿ ನಂ.1 ಸುಳ್ಳು**
**ಆರೋಪಿ ನಂ.2 ಸುಳ್ಳು**
**ಆರೋಪಿ ನಂ.3 ಸುಳ್ಳು**

ಪ್ರಶ್ನೆಃ7 ಪ್ರಾಸಾ6 ಲತಾ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿ 1 ರಿಂದ 3 ರವರನ್ನು ತಾವು ನೋಡಿದ್ದಾಗಿ, ಅವರು ತಮಗೆ ಗೊತ್ತು, ಆರೋಪಿ 1 ತಮ್ಮ ಅಕ್ಕನ ಮಗಳ ಗಂಡ, ಆರೋಪಿ 2 ಮತ್ತು 3 ರವರು ಚಾಸಾ-1 ರವರ ಅತ್ತೆ ಮಾವ ಆಗಿದ್ದಾಗಿ, ಚಾಸಾ-2 ತಮ್ಮ ಅಕ್ಕನ ಗಂಡದ ಚಾಸಾ-3 ತಮ್ಮ ಅಕ್ಕ, ದಿ ಃ 25.07.2012 ರಂದು ತಿಪಟೂರಿನ ವೀರಶೈವ ಕಲ್ಯಾಣ ಮಂಟಪದಲ್ಲಿ ಮದುವೆ ಮಾಡಿದ್ದಾಗಿ, ಮದುವೆಯ ನಂತರ ಸುಮಾರು 10 ತಿಂಗಳ ಕಾಲ ಆರೋಪಿ 1 ಮತ್ತು ಚಾಸಾ-1 ಚೆನ್ನಾಗಿಯೇ ಇದ್ದಿದ್ದಾಗಿ, ಮದುವೆಯ ಮೊದಲು ತಮ್ಮ ಅಕ್ಕನ

ಮನೆಯಾದ ಚಾಸಾ-3 ಗೌರಮ್ಮನ ಮನೆ ಬಳ್ಳೆಕಟ್ಟೆಯಲ್ಲಿ ಮಾತುಕತೆ ನಡೆದಿದ್ದಾಗಿ, ಸದರಿ ಮಾತುಕತೆಯಲ್ಲಿ ತಾವು ತಮ್ಮ ಅಣ್ಣ ಸಿದ್ದಲಿಂಗಮೂರ್ತಿ, ಚಾಸಾ-5, ಅದೇ ರೀತಿ ಚಾಸಾ-2ದ ಚಾಸಾ-4 ಮತ್ತು ತಮ್ಮ ಅಕ್ಕ ಹಾಜರಿದ್ದಾಗಿ, ಆರೋಪಿತರ ಕಡೆಯಿಂದ ಸದರಿ ಮಾತುಕತೆಗೆ ಆರೋಪಿತರು ಮೂರು ಜನ ಬಂದಿದ್ದಾಗಿ, ಮಾತುಕತೆಯಲ್ಲಿ ಹೆಣ್ಣಿಗೆ 150 ಗ್ರಾಂ ಚಿನ್ನ, ಗಂಡಿಗೆ 54 ಗ್ರಾಂ ಚಿನ್ನ, 1 ಕೆ ಜಿ ಬೆಳ್ಳಿ ತಟ್ಟೆ, ಚಂಬು ಅದೇ ರೀತಿಯಾಗಿ ನಗದಾಗಿ 1,50,000/- ಹಣವನ್ನು ಅವರು ಕೇಳಿಕೊಂಡಿದ್ದು ತಾವು ಅದಕೆಕ ಅಷ್ಟು ಕೊಡಲು ಆಗುವುದಿಲ್ಲ ಎಂದು ಹೇಳಿದ್ದಾಗಿ, ಅವರು ಒಪ್ಪದ ಕಾರಣ ತಾವು ಈ ಮೇಲೆ ಆರೋಪಿತರು ಕೇಳಿದ ಹಣ ಮತ್ತು ವಸ್ತುಗಳನ್ನು ಕೊಡಲು ಒಪ್ಪಿಕೊಂಡಿದ್ದಾಗಿ, ಸದರಿ ಎಲ್ಲಾ ಹಣ ಮತ್ತು ವಸ್ತುಗಳನ್ನು ಮದುವೆಯ ಸಂದರ್ಭದಲ್ಲಿ ತಾವು ಒಪ್ಪಿಕೊಂಡಂತೆ ಅವರಿಗೆ ನೀಡಿದ್ದಾಗಿ, ಮದುವೆಯಾದ ನಂತರ ಸುಮಾರು 10 ತಿಂಗಳುಗಳ ಕಾಲ ಚೆನ್ನಾಗಿ ಜೀವನ ನಡೆಸಿದ್ದಾಗಿ, ನಂತರ ಚಾಸಾ-1 ರವರಿಗೆ ಆರೋಪಿತರು 5 ಲಕ್ಷ ಹಣವನ್ನು ತರುವಂತೆ ಕೇಳಿದ್ದಾಗಿ, ತಮ್ಮ ಅಕ್ಕ ಭಾವ, ಚಾಸಾ-2 ಮತ್ತು 3 ರವರು ಸದರಿ 5 ಲಕ್ಷ ಹಣ ಕೊಡಲು ಆಗುವುದಿಲ್ಲ ಎಂದು ತಿಳಿಸಿದ್ದಾಗಿ, ಆದ್ದರಿಂದ ಆರೋಪಿತರು ಚಾಸಾ-1 ರವರ ಮೇಲೆ ಗಲಾಟೆಯನ್ನು ಮಾಡಿದ್ದಾಗಿ, ತಾವು ನೊಣವಿನಕೆರೆಯ ಮಠದ ಪಾಳ್ಯದಲ್ಲಿರುವ ಆರೋಪಿತರ ಮನೆಗೆ ಹೋಗಿ 2 ಮತ್ತು 3 ಬಾರಿ ರಾಜಿ ಪಂಚಾಯ್ತಿ ಮಾಡಿದ್ದಾಗಿ, ಚಾಸಾ-1 ರವರನ್ನು ಅವರ ಮನೆಯಲ್ಲಿ ಬಿಟ್ಟು ಬಂದಿದ್ದಾಗಿ, ನಂತರ ಆರೋಪಿತರು ಚಾಸಾ-1 ರವರನ್ನು ಗಲಾಟೆ ಮಾಡಿ ಹೊಡೆದು ಆಚೆ ಹಾಕಿದ್ದು, ಸದರಿ ವಿಚಾರವನುನ ತಮ್ಮ ಅಕ್ಕ ಚಾಸಾ-3 ರವರು ದೂರವಾಣಿ ಕರೆ ಮಾಡಿ ತಮಗೆ ತಿಳಿಸಿದ್ದಾಗಿ, ನಂತರ ತಾವು ಚಾಸಾ-2 ರಿಂದ 5 ರವರು ಆರೋಪಿತರ ಮನೆಗೆ ಬಳಿಗೆ ಹೋಗಿದ್ದಾಗಿ, ಸದರಿ

ಸಂದರ್ಭದಲ್ಲಿ ಚಾಸಾ-1 ರವರ ಮನೆಯ ಹೊರಗಡೆ ಇದ್ದು, ಆರೋಪಿತರ ಮನೆಯ ಒಳಗಡೆ ಅವರ ಮನೆಯ ಕಡೆಯವರು ಯಾರೋ 7 ರಿಂದ 8 ಜನ ಸಂಬಂಧಿಕರು ಇರುತ್ತಾರೆ, ತಾವು ತಮ್ಮ ಹುಡುಗಿ ಚಾಸಾ-1 ರವರಿಗೆ ಏಕೆ ಹೊಡೆದಿರಿ ಎಂದು ವಿಚಾರಿಸಲಾಗಿ ಆರೋಪಿತರು ತಮ್ಮ ಮೇಲೆ ದೌರ್ಜನ್ಯ ಮಾಡಿ ತಾವ್ಯಾರು ಕೇಳಲು ಎಂದು ಪ್ರಶ್ನಿಸಿ ಗಲಾಟೆ ಮಾಡಿ ಹೊಡೆದಿದ್ದಾಗಿ, ಸದರಿ ಸಂಧರ್ಭದಲ್ಲಿ ತಮ್ಮ ಹುಡುಗಿ ಚಾಸಾ-1 ರವರಿಗೆ ಬಿಡಿಸಲು ಬಂದಾಗ ಆರೋಪಿತರು ಚಾಸಾ-1 ರವರನ್ನು ತಳಿದ್ದು ಚಾಸಾ-1 ರವರು ಏಟು ಬಿತ್ತು ಏನೋ ಗೊತ್ತಿರುವುದಿಲ್ಲ ಆದರೆ ಪ್ರಜ್ಞೆ ತಪ್ಪಿ ಬಿದ್ದಿದ್ದಾಗಿ ತಾವು ತಕ್ಷಣ ಚಾಸಾ-1 ರವರನ್ನು ತಾರಾದೇವಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ ಆ ಸಂಧರ್ಭದಲ್ಲಿ ಚಾಸಾ-1 ರವರು ಮೂರು ತಿಂಗಳ ಗರ್ಭಿಣಿಯಾಗಿದ್ದಾಗಿ, ಆದ್ದರಿಂದ ಅವರಿಗೆ ರಕ್ತ ಸ್ರಾವ ಆಗಿದ್ದಾಗಿ, ಆಸ್ಪತ್ರೆಯಲ್ಲಿ ಚಾಸಾ-1 ರವರಿಗೆ ಅಬಾಷನ್ ಆಗಿದ್ದಾಗಿ, ನಂತರ ಚಾಸಾ-1 ರವರಿಗೆ ಚಿಕಿತ್ಸೆ ಕೊಡಿಸಿ ಚಾಸಾ-2 ರವರ ಮನೆಗೆ ಕರೆದುಕೊಂಡು ಹೋಗಿದ್ದಾಗಿ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರಃ- ಆರೋಪಿ ನಂ.1 ಸುಳ್ಳು**
**ಆರೋಪಿ ನಂ.2 ಸುಳ್ಳು**
**ಆರೋಪಿ ನಂ.3 ಸುಳ್ಳು**

ಪ್ರಶ್ನೆಃ8 ಪ್ರಾಸಾ15 ಎಂ.ಪಿ.ಶಿವನಂಜೇಗೌಡ ಪಿ ಡಿ ಓ ಇವರು ತಮ್ಮ ಸಾಕ್ಷ್ಯದಲ್ಲಿ ತಾವು ನೊಣವಿನಕೆರೆ ಗ್ರಾಮ ಪಂಚಾಯಿತಿಯಲ್ಲಿ 2013 ರಿಂದ 2021 ರವರೆಗೆ ಪಿ ಡಿ ಓ ಆಗಿ ಕರ್ತವ್ಯ ನಿರ್ವಹಿಸಿದ್ದಾಗಿ, ದಿನಾಂಕ 29.09.2016 ರಂದು 1ನೇ ಆರೋಪಿಯು ಖಾತಾ ನಂ.552 ರ ಎಕ್ಸ್ಟ್ರಾಕ್ಟನ್ನು ಅವರ ತಂದೆಯ ಹೆಸರಿನಲ್ಲಿ

ಇದ್ದಿದ್ದ ಪ್ರತಿಯನ್ನು ಕೇಳಿದ್ದಾಗಿ, ತಾವು ಅದಕ್ಕೆ ಸಂಬಂಧಪಟ್ಟ ಖಾತಾ ಎಕ್ಸ್ಟ್ರಾಕ್ಟ ನಕಲುಗಳನ್ನು ಅದೇ ದಿನದಂದು ನೀಡಿದ್ದಾಗಿ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರಃ- ಆರೋಪಿ ನಂ.1 ಸುಳ್ಳು**
**ಆರೋಪಿ ನಂ.2 ಸುಳ್ಳು**
**ಆರೋಪಿ ನಂ.3 ಸುಳ್ಳು**

ಪ್ರಶ್ನೆಃ9 ಪ್ರಾಸಾ16 ರಂಗಸ್ವಾಮಿ ನಿವೃತ್ತ ಪೋಲೀಸ್ ನಿರೀಕ್ಷಕರು ಇವರು ತಮ್ಮ ಸಾಕ್ಷ್ಯದಲ್ಲಿ ದಿ 30.09.2013 ರಿಂದ ದಿ 05.09.2015 ರವರೆಗೆ ತಾವು ನೊಣವಿನಕೆರೆ ಪೋಲೀಸ್ ಠಾಣೆಯಲ್ಲಿ ಪಿ ಎಸ್. ಐ ಆಗಿ ಕರ್ತವ್ಯ ನಿರ್ವಹಿಸಿದ್ದಾಗಿ, ದಿಃ 15.08.2014 ರಂದು ಮಧ್ಯಾಹ್ನ 1-45 ಗಂಟೆಗೆ ಈ ಪ್ರಕರಣದ ಚಾಸಾ-1 ಠಾಣೆಗೆ ಹಾಜರಾಗಿ ನೀಡಿರುವ ಲಿಖಿತ ದೂರಿನ ಮೇರೆಗೆ ಠಾಣಾ ಗುನ್ನೆ ನಂ.89/2014 ರಂತೆ ಪ್ರಕರಣವನ್ನು ದಾಖಲು ಮಾಡಿಕೊಂಡು ಪ್ರ. ವ. ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದಾಗಿ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರಃ- ಆರೋಪಿ ನಂ.1 ಸುಳ್ಳು**
**ಆರೋಪಿ ನಂ.2 ಸುಳ್ಳು**
**ಆರೋಪಿ ನಂ.3 ಸುಳ್ಳು**

ಪ್ರಶ್ನೆಃ10 ಪ್ರಾಸಾ18 ಸಿ ಪಿ ಬಾಲಚಂದ್ರೇಗೌಡ ನಿವೃತ್ತ ಆರಕ್ಷಕ ನಿರೀಕ್ಷಕರು ಇವರು ತಮ್ಮ ಸಾಕ್ಷ್ಯದಲ್ಲಿ ದಿ 01.10.2013 ರಿಂದ ದಿ 07.05.2015 ರವರೆಗೆ ತಿಪಟೂರು ಗ್ರಾಮಾಂತರ ವೃತ್ತದ ಆರಕ್ಷಕ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದಾಗಿ, 3ನೇ ಆರೋಪಿಯು ಗೈರು ಹಾಜರಿದ್ದು, ಆರೋಪಿಯನ್ನು ಗುರುತಿಸಲು ಯಾವುದೇ

ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ಸಲ್ಲಿಸಿದ್ದಾಗಿ, ದಿನಾಂಕ 16.08.2014 ರಂದು ಈ ಕೇಸಿನ ಕಡತವನ್ನು ಚಾಸಾ-17 ರವರಿಂದ ಪಡೆದುಕೊಂಡಿದ್ದಾಗಿ, ನಂತರ ಕೃತ್ಯ ನಡೆದ ಸ್ಥಳವಾದ ನೊಣವಿನಕೆರೆಯ ಮಠದ ಪಾಳ್ಯಕ್ಕೆ ಭೇಟಿ ನೀಡಿ ಪಂಚರುಗಳಾದ ಚಾಸಾ-10 ರಿಂದ 12 ರವರ ಸಮಕ್ಷಮ ಹಾಗೂ ಚಾಸಾ-1 ರವರು ತೋರಿಸುವ ಸ್ಥಳದಲ್ಲಿ ಸಂಜೆ 5-00 ಗಂಟೆಯಿಂದ 5-30 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿದ್ದಾಗಿ, ನಂತರ ಈ ಕೇಸಿನ ಪ್ರತ್ಯಕ್ಷ ಸಾಕ್ಷಿಯಾದ ಚಾಸಾ-7 ರವರ ಹೇಳಿಕೆಯನ್ನು ಪಡೆದುಕೊಂಡಿದ್ದಾಗಿ, ಅದೇ ರೀತಿ ಚಾಸಾ-2 ಮತ್ತು ಚಾಸಾ-3 ರವರ ಹೇಳಿಕೆಯನ್ನು ಸಹ ಪಡೆದುಕೊಂಡಿದ್ದಾಗಿ, ದಿನಾಂಕ 18.08.2014 ರಂದು ಸಾಕ್ಷಿದಾರರಾದ ಚಾಸಾ-4 ರಿಂದ 6 ಮತ್ತು 8 ರವರ ಹೇಳಿಕೆಯನ್ನು ಪಡೆದುಕೊಂಡಿದ್ದಾಗಿಚಿ ದಿನಾಂಕ 27.08.2014 ರಂದು ಚಾಸಾ-1 ರವರು ಠಾಣಾಗೆ ಹಾಜರಾಗಿ ಅವರ ಮದುವೆಯ ವಿವಾಹ ಪತ್ರ ಹಾಗೂ ಭಾವಚಿತ್ರಗಳನ್ನು ಹಾಜರು ಪಡಿಸಿದ್ದಾಗಿ ಅದನ್ನು ಪಡೆದುಕೊಂಡು ಪಂಚರಾದ ಚಾಸಾ-13 ಮತ್ತು 14 ರವರ ಸಮಕ್ಷಮ ಪಂಚನಾಮೆ ತಮ್ಮ ಠಾಣೆಯ ಮಧ್ಯಾಹ್ನ 12-00 ಗಂಟೆಯಿಂದ 12-45 ಗಂಟೆಯವರೆಗೂ ಜರುಗಿಸಿದ್ದಾಗಿ ಹಾಗೂ ಚಾಸಾ-1 ರವರು ನೀಡಿದ ಫೋಟೋ ಹಾಗೂ ಲಗ್ನಪತ್ರಿಕೆಯನ್ನು ವಶಕ್ಕೆ ಅಳವಡಿಸಿಕೊಂಡಿದ್ದಾಗಿ, ದಿನಾಂಕ 02.09.2014 ರಂದು ಪ್ರಕರಣದ ಆರೋಪಿತರಾದ ಚಾಸಾ-1 ರಿಂದ 3 ರವರು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇವರಿಂದ ಜಾಮೀನು ಪಡೆದುಕೊಂಡು ಬಂದಿದ್ದಾಗಿ ದಸ್ತಗಿರಿ ಕ್ರಮವನ್ನು ಜರುಗಿಸಿ 1ನೇ ಆರೋಪಿಯ ಹೇಳಿಕೆಯನ್ನು ಪಡೆದುಕೊಂಡಿದ್ದಾಗಿ ದಿನಾಂಕ 29.09.2014 ರಂದು ಶ್ರೀ ವೀರಶೈವ ಗುರುಕುಲ ಕಲ್ಯಾಣ ಮಂಟಪದಿಂದ

ಚಾಸಾ-1 ರವರು ಹಾಗೂ ಆರೋಪಿಯ ಮದುವೆಯ ದಾಖಾಲಾತಿ ಪತ್ರವನ್ನು ಕಲ್ಯಾಣ ಮಂಟಪದಿಂದ ಚಾಸಾ-15 ರವರಿಂದ ಪಡೆದುಕೊಂಡಿದ್ದಾಗಿ, ಅದೇ ದಿನ ಆರೋಪಿತರ ಮನೆಯ ವಿವರವನ್ನು ಚಾಸಾ-16 ರವರಿಂದ ಖಾನೇಷುಮಾರಿ ಪ್ರತಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿದ್ದಾಗಿ, ನಂತರ ಅದೇ ದಿನ ಆರೋಪಿತರ ವಿರುದ್ಧ ಆರೋಪಣೆ ಸಾಭೀತಾದ ಕಾರಣ ಘನ ನಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

**ಉತ್ತರಃ- ಆರೋಪಿ ನಂ.1 ಸುಳ್ಳು**
**ಆರೋಪಿ ನಂ.2 ಸುಳ್ಳು**
**ಆರೋಪಿ ನಂ.3 ಸುಳ್ಳು**

ಪ್ರಶ್ನೆಃ **11-** ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ**?**

**ಉತ್ತರಃ- ಆರೋಪಿ ನಂ.1 ಇಲ್ಲ**
**ಆರೋಪಿ ನಂ.2 ಇಲ್ಲ**
**ಆರೋಪಿ ನಂ.3 ಇಲ್ಲ**

ಪ್ರಶ್ನೆಃ **12 -** ನಿಮ್ಮ ಪರವಾಗಿ ಏನಾದರೂ ಸಾಕ್ಷಿ ಇದೆಯಾ**?**

**ಉತ್ತರಃ- ಆರೋಪಿ ನಂ.1 ಇದೆ**
**ಆರೋಪಿ ನಂ.2 ಇದೆ**
**ಆರೋಪಿ ನಂ.3 ಇದೆ**

(ದಿನಾಂಕಃ 06.01.2026 ರಂದು ನನ್ನ ಸಮಕ್ಷಮ 1 ರಿಂದ 12 ರವರೆಗಿನ ಪ್ರಶ್ನೆಗಳನ್ನು ಆರೋಪಿಗಳಿಗೆ ಓದಿ ಹೇಳಿ ಅವರಿಂದ ಬಂದ ಸಮರ್ಪಕವಾದ ಉತ್ತರವನ್ನು ಪಡೆದು

ದಾಖಲಿಸಿಕೊಳ್ಳಲಾಯಿತೆಂದು ಈ ಮೂಲಕ ಧೃಡೀಕರಿಸುತ್ತೇನೆ.)

ಸಹಿ/-
ಅಧಿಕ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ತಿಪಟೂರು.